ಓ.ಎಸ್.ನಂ.350-2022
ಪಿ.ಡಬ್ಲು-೧

ದಿ: 04-07-2024 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿ ಮುಂದುವರೆದ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರವಾಗಿ ಶ್ರೀಯುತ ಜಿ.ಕೆ ವಕೀಲರಿಂದ

ನೆಲವಾಗಿಲು ಗ್ರಾಂ.ಪಂ.ರವರು ನೀಡಿದ ಆಸ್ತಿ ಸಂಖ್ಯೆ 3/3 ಮತ್ತು 3/4 ರ 2008-09 ನೇ ಸಾಲಿನ ಮನೆ ತೆರಿಗೆ ಪಟ್ಟಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.1 ಎಂದು, ಪಿ.ಡಿ.ಓ. ನೆಲವಾಗಿಲು ಗ್ರಾಂ.ಪಂ ರವರು ನೀಡಿದ ಆಸ್ತಿ ಗುರುತಿನ ಸಂಖ್ಯೆಯ ಪಂಚತಂತ್ರದ ದತ್ತಾಂಶದ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು, ನಿಪಿ.2 ಎಂದು, ದಿ:13.09.2019 ರ ನೊಂದಾಯಿತ ವಿಭಾಗ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.3 ಎಂದು, ಕೆ.ಎಲ್.ಶಶೀಧರ್ , ಸಿವಿಲ್ ಅಭಿಯಂತರರು ನೀಡಿದ ನಕ್ಷೆಯನ್ನು ಹಾಜರುಪಡಿಸಿದ್ದು ನಿಪಿ.4 ಎಂದು, ಯಶವಂತಪುರ ಗ್ರಾಮದ ಗ್ರಾಮ ನಕ್ಷೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ನಿಪಿ.5 ಎಂದು, ಯಶವಂತಪುರ ಗ್ರಾಮದ ಸರ್ವೆ ನಂ.4 ಹಿಸ್ಸಾ 11 ವಿಸ್ತೀರ್ಣ 0.32 ಗುಂಟೆ ಜಮೀನಿನ 2018-19 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ನಿಪಿ.6 ಎಂದು, ಯಶವಂತಪುರ ಗ್ರಾಮದ ಸರ್ವೆ ನಂ.4 ಹಿಸ್ಸಾ 11 ವಿಸ್ತೀರ್ಣ 0.32 ಗುಂಟೆ ಜಮೀನಿನ 2022-23 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ನಿಪಿ.7 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.